**All India Radio: Bangalore**
**National Bulletin In Kannada**
**02.05.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.05.2026 1.10 p.m.**

**<><><><>**

ಮುಖ್ಯಾಂಶಗಳು

1. ಪಶ್ಚಿಮ ಬಂಗಾಳ ಮತ ಎಣಿಕೆ ಸಿಬ್ಬಂದಿ ನೇಮಕ ವಿಚಾರ: ಆಯೋಗದ ನಿರ್ಧಾರದಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿದ ಸುಪ್ರೀಂಕೋರ್ಟ್
2. ೨೦೨೬-೨೭ನೇ ಸಾಲಿನ ನಾಲ್ಕು ಪ್ರಮುಖ ಸಂಸದೀಯ ಸಮಿತಿಗಳನ್ನು ಪುನರ್ ರಚಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ
3. ಡಿಜಿಟಲ್ ಸುಧಾರಣೆಗಳಿಂದ ಸಣ್ಣ ಉದ್ದಿಮೆಗಳ ಉತ್ಪಾದಕತೆ ವೃದ್ಧಿ: ಐಎಂಎಫ್ ಶ್ಲಾಘನೆ
4. ದೇಶಾದ್ಯಂತ ಮೊಬೈಲ್ ತುರ್ತು ಎಚ್ಚರಿಕೆ ವ್ಯವಸ್ಥೆಯ ಪ್ರಾಯೋಗಿಕ ಪರೀಕ್ಷೆ ನಡೆಸಿದ ಕೇಂದ್ರ ಸರ್ಕಾರ
5. ಥಾಮಸ್ ಕಪ್ - ೨೦೨೬ ಬ್ಯಾಡ್ಮಿಂಟನ್: ಸೆಮಿಫೈನಲ್ ಪಂದ್ಯದಲ್ಲಿಂದು ಭಾರತ - ಫ್ರಾನ್ಸ್ ಪುರುಷರ ತಂಡಗಳು ಕಣದಲ್ಲಿ

<><><><>

ಮತ ಎಣಿಕೆ ಮೇಲ್ವಿಚಾರಕರಾಗಿ ಕೇಂದ್ರ ಸರ್ಕಾರಿ ನೌಕರರನ್ನು ಮಾತ್ರ ನೇಮಿಸುವ ಚುನಾವಣಾ ಆಯೋಗದ ನಿರ್ಧಾರದಲ್ಲಿ ಹಸ್ತಕ್ಷೇಪ ಮಾಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಕೋಲ್ಕತ್ತಾ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ, ತೃಣಮೂಲ ಕಾಂಗ್ರೆಸ್ ಸಲ್ಲಿಸಿದ್ದ ತುರ್ತು ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜಾಯ್ ಮಲ್ಯ ಬಾಗ್ಚಿ ಅವರನ್ನೊಳಗೊಂಡ ಸುಪ್ರೀಂಕೋರ್ಟ್ ವಿಶೇಷ ಪೀಠ, ಕೋಲ್ಕತ್ತಾ ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದಿದೆ. ವಿಚಾರಣೆಯ ವೇಳೆ ನ್ಯಾಯಮೂರ್ತಿ ಜಾಯ್ ಮಲ್ಯ ಬಾಗ್ಚಿ, ಅಧಿಕಾರಿಗಳ ಆಯ್ಕೆ ಚುನಾವಣಾ ಆಯೋಗಕ್ಕೆ ಬಿಟ್ಟ ವಿಚಾರವಾಗಿದೆ ಎಂದು ಅಭಿಪ್ರಾಯಪಟ್ಟರು. ಪ್ರತಿ ಎಣಿಕೆ ಮೇಜಿನ ಬಳಿ ಈಗಾಗಲೇ ಏಜೆಂಟ್‌ಗಳು ಮತ್ತು ವೀಕ್ಷಕರು ಇರುವುದರಿಂದ ಕೇಂದ್ರ ಸರ್ಕಾರಿ ನೌಕರರ ಉಪಸ್ಥಿತಿಯ ಬಗ್ಗೆ ಆತಂಕ ಏಕೆ ಎಂದು

ಪ್ರಶ್ನಿಸಿದರು.ಇದೇ ವೇಳೆ ನ್ಯಾಯಪೀಠ, ಆಯೋಗದ ಸುತ್ತೋಲೆಯನ್ನು ಅಕ್ಷರಶಃ ಪಾಲಿಸಬೇಕು ಎಂದು ಆದೇಶಿಸಿತು. ಪಾರದರ್ಶಕತೆ ಕಾಪಾಡಲು ಸಿಸಿಟಿವಿ ದೃಶ್ಯಾವಳಿಗಳನ್ನು ಸಂರಕ್ಷಿಸುವಂತೆ ಕೋರಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರ ಮನವಿಗೆ ಸ್ಪಂದಿಸಿದ ಆಯೋಗ, ದೃಶ್ಯಾವಳಿಗಳನ್ನು ೪೫ ದಿನಗಳ ವರೆಗೆ ಸಂಗ್ರಹಿಸಿಡಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದೆ.

<><><><>

ಪಶ್ಚಿಮ ಬಂಗಾಳದ ೧೫ ಮತಗಟ್ಟೆಗಳಲ್ಲಿ ಮರುಮತದಾನ ನಡೆಸುವಂತೆ ಚುನಾವಣಾ ಆಯೋಗವು ಆದೇಶಿಸಿದೆ. ರಾಜ್ಯದ ಮಗ್ರಾಹತ್ ಪಶ್ಚಿಮ ವಿಧಾನಸಭಾ ಕ್ಷೇತ್ರದ ೧೧ ಮತಗಟ್ಟೆಗಳಲ್ಲಿ ಮತ್ತು ಡೈಮಂಡ್ ಹಾರ್ಬರ್ ವಿಧಾನಸಭಾ ಕ್ಷೇತ್ರದ ನಾಲ್ಕು ಮತಗಟ್ಟೆಗಳಲ್ಲಿ ಇಂದು ಮತದಾನ ನಡೆಯುತ್ತಿದೆ. ಬೆಳಿಗ್ಗೆ ೭ ರಿಂದ ಆರಂಭವಾಗಿರುವ ಮತದಾನ ಪ್ರಕ್ರಿಯೆ ಸಂಜೆ ೬ ರವರೆಗೆ ಜರುಗಲಿದೆ.  ಮೊದಲೆರಡು ಗಂಟೆಗಳಲ್ಲಿ ೧೫ ಮತಗಟ್ಟೆಗಳಾದ್ಯಂತ ಶೇಕಡ ೧೬ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಿದೆ. ಕಳೆದ ಬುಧವಾರ ಪಶ್ಚಿಮ ಬಂಗಾಳದ ಎರಡನೇ ಹಂತದ ವಿಧಾನಸಭಾ ಚುನಾವಣೆಯ ವೇಳೆ ಈ ಮತಗಟ್ಟೆಗಳಲ್ಲಿ ಮತದಾನ ನಡೆದಿತ್ತು. ಈ ವೇಳೆ ಅಕ್ರಮಗಳು ನಡೆದಿರುವ ಕುರಿತು ಸಂಬಂಧಪಟ್ಟ ಚುನಾವಣಾಧಿಕಾರಿಗಳು ಮತ್ತು ವೀಕ್ಷಕರಿಂದ ಬಂದ ವರದಿಗಳ ಆಧಾರದ ಮೇಲೆ ಆಯೋಗವು ಈ ನಿರ್ಧಾರ ಕೈಗೊಂಡಿದೆ.

<><><><>

ಲೋಕಸಭೆಯ ಸಭಾಧ್ಯಕ್ಷ ಓಂ ಬಿರ್ಲಾ ಅವರು, ೨೦೨೬-೨೭ನೇ ಸಾಲಿನ ನಾಲ್ಕು ಪ್ರಮುಖ ಸಂಸದೀಯ ಸಮಿತಿಗಳನ್ನು ಪುನರ್ ರಚಿಸಿದ್ದಾರೆ. ಈ ಸಮಿತಿಗಳ ಅವಧಿ ಈ ತಿಂಗಳ ಒಂದರಿಂದ ಆರಂಭವಾಗಿದ್ದು, ಮುಂದಿನ ವರ್ಷದ ಏಪ್ರಿಲ್ ೩೦ರ ವರೆಗೆ ಇರಲಿದೆ. ಬಿಜೆಪಿ ಸಂಸದ ಡಾ. ಸಂಜಯ್ ಜೈಸ್ವಾಲ್ ಅವರನ್ನು ೩೦ ಸದಸ್ಯರಿರುವ ಅಂದಾಜು ಸಮಿತಿಯ ಅಧ್ಯಕ್ಷರಾಗಿ ನೇಮಿಸಲಾಗಿದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಅಧ್ಯಕ್ಷರಾಗಿ ಬಿಜೆಪಿಯ ಸಂಸದ ಬೈಜಯಂತ್ ಪಾಂಡಾ ಅವರನ್ನು ನೇಮಕ ಮಾಡಲಾಗಿದ್ದು, ಈ ಸಮಿತಿಯಲ್ಲಿ ಲೋಕಸಭೆಯ ೧೫ ಮತ್ತು ರಾಜ್ಯಸಭೆಯ ೭ ಸದಸ್ಯರಿರಲಿದ್ದಾರೆ. ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಅವರನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಇನ್ನು ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿ ಬಿಜೆಪಿ ಸಂಸದ ಫಗ್ಗನ್ ಸಿಂಗ್ ಕುಲಾಸ್ತೆ ಅವರನ್ನು ನೇಮಿಸಲಾಗಿದೆ.

<><><>

ಭಾರತ, ಸಾರ್ವಜನಿಕ ಆಡಳಿತದಲ್ಲಿ ಅಳವಡಿಸಿಕೊಂಡಿರುವ ಡಿಜಿಟಲೀಕರಣ ಪ್ರಕ್ರಿಯೆ ಸಣ್ಣ ಮತ್ತು ಅತಿಸಣ್ಣ ಉದ್ದಿಮೆಗಳ ಉತ್ಪಾದಕತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ತಿಳಿಸಿದೆ. ರಾಷ್ಟ್ರೀಯ ಸಮೀಕ್ಷೆ ದತ್ತಾಂಶ ಆಧಾರಿತ ತನ್ನ ವರದಿಯಲ್ಲಿ ಐಎಂಎಫ್, ೨೦೧೦ರಿಂದ ೨೦೧೫ರ ಅವಧಿಯಲ್ಲಿ ವಿವಿಧ ರಾಜ್ಯಗಳು ಜಾರಿಗೆ ತಂದ ತೆರಿಗೆ ಸಲ್ಲಿಕೆ, ಪರವಾನಗಿ ಮತ್ತು ತಪಾಸಣೆಯಂತಹ ಡಿಜಿಟಲ್ ಸುಧಾರಣೆಗಳು ಉದ್ದಿಮೆಗಳ ಮೇಲಿನ ಹೊರೆ ತಗ್ಗಿಸಿವೆ ಎಂದು ವಿಶ್ಲೇಷಿಸಿವೆ. ಡಿಜಿಟಲ್ ವ್ಯವಸ್ಥೆಗಳಿಂದಾಗಿ ವ್ಯವಹಾರ ವೆಚ್ಚ ಮತ್ತು ವಿಳಂಬ ತಗ್ಗಿದ್ದು, ಪಾರದರ್ಶಕತೆ ಹೆಚ್ಚಿದೆ. ಹೆಚ್ಚಿನ ಸುಧಾರಣೆಗಳನ್ನು ತಂದ ರಾಜ್ಯಗಳಲ್ಲಿ ಉದ್ದಿಮೆಗಳ ನಡುವಿನ ಉತ್ಪಾದಕತೆಯ ಅಂತರ ತಗ್ಗಿದ್ದು, ಸಂಪನ್ಮೂಲಗಳ ಸಮರ್ಪಕ ಬಳಕೆ ಸಾಧ್ಯವಾಗಿದೆ ಎಂದು ಐಎಂಎಫ್ ತಿಳಿಸಿದೆ. ಸುಮಾರು ೧೧ ಕೋಟಿ ಕಾರ್ಮಿಕರಿಗೆ ಉದ್ಯೋಗ ನೀಡಿರುವ ಮತ್ತು ಉತ್ಪಾದನಾ ವಲಯದಲ್ಲಿ ಶೇಕಡ ೩೫ರಷ್ಟು ಪಾಲು ಹೊಂದಿರುವ ಸಣ್ಣ ಉದ್ದಿಮೆಗಳ ಬೆಳವಣಿಗೆಗೆ ಈ ಡಿಜಿಟಲ್ ಆಡಳಿತ ಪೂರಕವಾಗಿದೆ ಎಂದು ಅಂತಾರಾಷ್ಟ್ರೀಯ ಸಂಸ್ಥೆ ಅಭಿಪ್ರಾಯಪಟ್ಟಿದೆ.

<><><>

ನೈಸರ್ಗಿಕ ವಿಕೋಪಗಳು ಮತ್ತು ತುರ್ತು ಸಂದರ್ಭದಲ್ಲಿ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಲು ಕೇಂದ್ರ ಸರ್ಕಾರ ಇಂದು ಸೆಲ್ ಬ್ರಾಡ್‌ಕಾಸ್ಟ್ ಅಲರ್ಟ್ ಎಂಬ ಸ್ವದೇಶಿ ಮೊಬೈಲ್ ತುರ್ತು ಎಚ್ಚರಿಕೆ ವ್ಯವಸ್ಥೆಯನ್ನು ದೇಶಾದ್ಯಂತ ಯಶಸ್ವಿಯಾಗಿ ಪರೀಕ್ಷಿಸಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಈ ಪರೀಕ್ಷಾರ್ಥ ಸಂದೇಶವನ್ನು ರವಾನಿಸಲಾಗಿದೆ. ಇಂದು ಅನೇಕ ನಾಗರಿಕರ ಮೊಬೈಲ್ ಫೋನ್‌ಗಳಿಗೆ ಫ್ಲಾಶ್ ಎಸ್‌ಎಂಎಸ್ ಸಂದೇಶಗಳು ಬಂದಿದ್ದು, ಇದು ಕೇವಲ ಪರೀಕ್ಷಾರ್ಥ ಸಂದೇಶ, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸುನಾಮಿ, ಭೂಕಂಪ, ಸಿಡಿಲು ಮತ್ತು ಅನಿಲ ಸೋರಿಕೆಯಂತಹ ತುರ್ತು ಸಂದರ್ಭಗಳಲ್ಲಿ ನಿರ್ದಿಷ್ಟ ಪ್ರದೇಶದ ಜನರಿಗೆ ಏಕಕಾಲದಲ್ಲಿ ಕ್ಷಿಪ್ರವಾಗಿ ಮಾಹಿತಿ ತಲುಪಿಸುವುದು ಈ ತಂತ್ರಜ್ಞಾನದ ಪ್ರಮುಖ ಉದ್ದೇಶವಾಗಿದೆ.

<><><>

೧೨ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ೫೦ ದಿನಗಳ ಕ್ಷಣಗಣನೆಯ ಅಂಗವಾಗಿ ಮುರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ತೆಲಂಗಾಣದಲ್ಲಿಂದು ಯೋಗ ಮಹೋತ್ಸವ - ೨೦೨೬ಅನ್ನು ಆಯೋಜಿಸಿತ್ತು. ಸಾರ್ವಜನಿಕರಲ್ಲಿ ಯೋಗದ ಕುರಿತು ಅರಿವು ಮೂಡಿಸಲು ಮತ್ತು ಸಾಮೂಹಿಕ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಆಯುಷ್ ಸಚಿವಾಲಯ ದೇಶಾದ್ಯಂತ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳ ಭಾಗವಾಗಿ ಈ ಮಹೋತ್ಸವ ಆಯೋಜನೆ ಮಾಡಲಾಗಿತ್ತು. ಸಿಂಗಾಪುರ, ಚೀನಾ, ಬ್ರೆಜಿಲ್ ಸೇರಿದಂತೆ ವಿವಿಧ ದೇಶಗಳ ರಾಯಭಾರ ಕಚೇರಿ ಪ್ರತಿನಿಧಿಗಳು ವರ್ಚುವಲ್ ಆಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಸಚಿವರಾದ ಜಿ. ಕಿಶನ್ ರೆಡ್ಡಿ ಮತ್ತು ಪ್ರತಾಪರಾವ್ ಜಾಧವ್ ಉಪಸ್ಥಿತರಿದ್ದರು.

<><><><>

ಒಮಾನ್, ಕೊಲ್ಲಿ ಮತ್ತು ಪ್ರಮುಖ ಸಮುದ್ರ ಮಾರ್ಗಗಳಲ್ಲಿ ಅಮೆರಿಕ ವಿಧಿಸಿರುವ ನೌಕಾ ದಿಗ್ಬಂಧನದಿಂದಾಗಿ ಇರಾನ್ ಸುಮಾರು ೪.೮ ಶತಕೋಟಿ ಡಾಲರ್ ತೈಲ ಆಮದನ್ನು ಕಳೆದುಕೊಂಡಿದೆ ಎಂದು ಅಮೆರಿಕ ವರದಿಯನ್ನು ಉಲ್ಲೇಖಿಸಿ, ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಟೆಹ್ರಾನ್ ಮೇಲೆ ನಿರಂತರ ಆರ್ಥಿಕ ಒತ್ತಡ ಹೇರುವುದು ಈ ಕಾರ್ಯಾಚರಣೆಯ ಪ್ರಮುಖ ಉದ್ದೇಶವಾಗಿದೆ ಎಂದು ಅಮೆರಿಕ ರಕ್ಷಣಾ ಇಲಾಖೆಯ ವಕ್ತಾರ ಸೀನ್ ಪಾರ್ನೆಲ್ ತಿಳಿಸಿದ್ದಾರೆ.

<><><><>

ಮುಂಬರುವ ಮುಂಗಾರು ಹಂಗಾಮಿನ ಹಿನ್ನೆಲೆಯಲ್ಲಿ ಪ್ರವಾಹ ಮುನ್ಸೂಚನೆ ಮಾದರಿಯ ಕುರಿತು ಚರ್ಚಿಸಲು ಭಾರತ ಮತ್ತು ನೇಪಾಳದ ಪ್ರತಿನಿಧಿಗಳ ಸಭೆ ಕಠ್ಮಂಡುವಿನಲ್ಲಿಂದು ನಡೆಯಲಿದೆ. ಬಿಹಾರದ ಜಲಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಅವರ ನೇತೃತ್ವದಲ್ಲಿ ಭಾರತೀಯ ನಿಯೋಗ ಈ ಸಭೆಯಲ್ಲಿ ಭಾಗವಹಿಸಲಿದೆ. ಇದಕ್ಕೂ ಮುನ್ನ ಏಪ್ರಿಲ್ ೩೦ ಮತ್ತು ನಿನ್ನೆ ಕಠ್ಮಂಡುವಿನಲ್ಲಿ ನಡೆದ ಕೋಸಿ ಮತ್ತು ಗಂಡಕ್ ಯೋಜನೆಗಳ ೧೧ನೇ ಭಾರತ - ನೇಪಾಳ ಜಂಟಿ ಸಮಿತಿ ಸಭೆ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಸಭೆಯಲ್ಲಿ ಜಲನಿರ್ವಹಣೆ ಮತ್ತು ಮೂಲಸೌಕರ್ಯಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಉಭಯ ರಾಷ್ಟ್ರಗಳು ಸಹಮತ ವ್ಯಕ್ತಪಡಿಸಿವೆ.

<><><><>

ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಜೂನ್ ೧೫ರಿಂದ ವಾಣಿಜ್ಯ ವಿಮಾನಯಾನ ಕಾರ್ಯಾಚರಣೆಯನ್ನು ಆರಂಭಿಸುವುದಾಗಿ ಘೋಷಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಉದ್ಘಾಟನೆ ಮತ್ತು ಬ್ಯೂರೋ ಆಫ್ ಸಿವಿಲ್ ಏವಿಯೇಷನ್ ಸೆಕ್ಯೂರಿಟಿಯಿಂದ ಅಗತ್ಯ ಅನುಮೋದನೆ ದೊರೆತ ನಂತರ ಈ ಸೇವೆಗಳು ಆರಂಭವಾಗುತ್ತಿವೆ. ಇಂಡಿಗೋ ಸಂಸ್ಥೆಯು ಇಲ್ಲಿಂದ ಮೊದಲ ವಿಮಾನಯಾನ ನಡೆಸಲಿದ್ದು, ನಂತರ ಅಕಾಸಾ ಏರ್ ಮತ್ತು ಏರ್‌ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಗಳು ತಮ್ಮ ಸೇವೆಗಳನ್ನು ಒದಗಿಸಲಿವೆ.

<><><><>

ಡೆನ್ಮಾರ್ಕ್‌ನಲ್ಲಿ ನಡೆಯುತ್ತಿರುವ ಥಾಮಸ್ ಕಪ್ - ೨೦೨೬ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿಂದು ಭಾರತದ ಪುರುಷರ ತಂಡ ಫ್ರಾನ್ಸ್ ತಂಡವನ್ನು ಎದುರಿಸಲಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತೈಪೆ ವಿರುದ್ಧ ೩-೦ ಅಂತರದ ಜಯ ಸಾಧಿಸುವ ಮೂಲಕ ಭಾರತ ಅಂತಿಮ ೪ರ ಘಟ್ಟಕ್ಕೆ ಪ್ರವೇಶಿಸಲಿದೆ.

<><><><>

ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಲಿದೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಜೈಪುರದಲ್ಲಿ ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ರಾಜಸ್ತಾನ್ ರಾಯಲ್ಸ್ ವಿರುದ್ಧ ೭ ವಿಕೆಟ್‌ಗಳ ಜಯ ಸಾಧಿಸಿದೆ.

<><><><>

ಚೀನಾದಲ್ಲಿಂದು ಎಎಫ್‌ಸಿ ೧೭ ವರ್ಷದೊಳಗಿನವರ ಮಹಿಳಾ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ ಕಣಕ್ಕಿಳಿಯುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ೨೦೦೫ರ ನಂತರ ಅಂದರೆ ೨೧ ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಭಾರತ ಈ ಮಟ್ಟದ ಟೂರ್ನಿಯಲ್ಲಿ ಭಾಗವಹಿಸುತ್ತಿದೆ. ಭಾರತೀಯ ಕಾಲಮಾನ ಸಂಜೆ ೫ ಗಂಟೆಗೆ ಈ ಪಂದ್ಯ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>